> ಮೊದಲು ಜಾಝ್ ಕ್ಲಬ್ ಇಟ್ಟುಕೊಂಡಿದ್ದೆ. ಕಾಕ್‌ಟೈಲ್, ಸ್ಯಾಂಡ್‌ವಿಚ್ ಮಾಡುತ್ತಿದ್ದೆ. ಲೇಖಕನಾಗಬೇಕು ಎಂದುಕೊಂಡಿರಲಿಲ್ಲ. ಅದು ಘಟಿಸಿತು ಅಷ್ಟೇ. ಅದೊಂದು ರೀತಿಯ ವರ. ಆದಕ್ಕೆ ವಿನಮ್ರನಾಗಿರಬೇಕು.



◆ **ಅಮೆರಿಕನ್ ಪತ್ತೆದಾರಿ ಕಾದಂಬರಿಗಳನ್ನು ಯಾವ ವಯಸ್ಸಿನಿಂದ ಓದುತ್ತಿರುವಿರಿ?**

ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗಲೇ ಆ ಕ್ರೈಂ ನಾವೆಲ್ಲುಗಳ ಹುಚ್ಚು ಹತ್ತಿತು. ಆಗ ಕೋಬೆ ಎನ್ನುವ ಬಂದರು ಪಟ್ಟಣದಲ್ಲಿದ್ದೆವು. ಅಲ್ಲಿಗೆ ಬಹಳಷ್ಟು ಮಂದಿ ವಿದೇಶಿಯರು, ನಾವಿಕರು ಬರುತ್ತಿದ್ದರು. ಅವರು ತಮ್ಮಲ್ಲಿನ ಹಳೆಯ ಪುಸ್ತಕಗಳನ್ನು ಸೆಕೆಂಡ್‌ಹ್ಯಾಂಡ್ ಪುಸ್ತಕದಂಗಡಿಗೆ ಮಾರುತ್ತಿದ್ದರು. ಅವು ಕಡಿಮೆ ಬೆಲೆಗೆ ಸಿಕ್ಕುತ್ತಿದ್ದರಿಂದ ಕೊಳ್ಳುತ್ತಿದ್ದೆ. ಆ ಪುಸ್ತಕಗಳಿಂದಲೇ ಇಂಗ್ಲಿಷ್ ಓದಲು ಕಲಿತೆ. ಅದೊಂದು ತರಹ ರೋಮಾಂಚಕ ಅನುಭವ.

◆ **ನೀವು ಇಂಗ್ಲಿಷಿನಲ್ಲಿ ಓದಿದ ಮೊದಲ ಪುಸ್ತಕ ಯಾವುದು?**

ರೋಸ್ ಮ್ಯಾಕ್‌ಡೊನಾಲ್ಡ್(ಅಮೆರಿಕನ್ ಲೇಖಕ)ನ ಆ ಪುಸ್ತಕಗಳಿಂದ ಬಹಳಷ್ಟನ್ನು ಕಲಿತೆ. ಒಮ್ಮೆ ಓದಲು ಶುರುಮಾಡಿದರೆ ನಿಲ್ಲಿಸಲು ಮನಸ್ಸಾಗುತ್ತಿರಲಿಲ್ಲ. ಅದರೊಂದಿಗೆ ಟಾಲ್‌ಸ್ಟಾಯ್, ದಾಸ್ತೊವಸ್ಕಿಯನ್ನು (ರಷ್ಯನ್ ಲೇಖಕರು) ಕೂಡ ಓದುತ್ತಿದ್ದೆ. ಅವರ ಪುಸ್ತಕಗಳು ಕೂಡ ಸರಾಗವಾಗಿ ಓದಿಸಿಕೊಳ್ಳುತ್ತಿದ್ದವು. ಅವು ದೊಡ್ಡ ಪುಸ್ತಕಗಳಾಗಿದ್ದರೂ ಬಿಡದೆ ಓದುತ್ತಿದ್ದೆ. ನನಗೆ ರೇಮಂಡ್ ಚಾಂಡ್ಲರ್ (ಅಮೆರಿಕನ್ ಲೇಖಕ), ದಾಸ್ತೊವಸ್ಕಿ ಇಬ್ಬರೂ ಒಂದೇ. ಇವತ್ತಿಗೂ ಅವರಿಬ್ಬರೂ ನನ್ನ ಆದರ್ಶ. ಅವರಿಬ್ಬರ ಶೈಲಿಯನ್ನು ಬೆರೆಸಿ ಕಾದಂಬರಿ ಬರೆಯಬೇಕೆಂಬುದು ನನ್ನ ಗುರಿ.

◆ **ಎಷ್ಟನೇ ವಯಸ್ಸಿನಲ್ಲಿ ಕಾಫ್ಕನನ್ನು ಓದಿದ್ದು?**

ಹದಿನೈದನೆಯ ವಯಸ್ಸಿನಲ್ಲಿ 'The Castle', 'The Trial' ಓದಿದೆ. ಅವು ಅದ್ಭುತ ಪುಸ್ತಕಗಳು.

◆ **ಆ ಎರಡೂ ಕಾದಂಬರಿಗಳು ಅಪೂರ್ಣ, ಅಂದರೆ ಅವುಗಳಿಗೆ ಅಂತ್ಯವಿಲ್ಲ. ನಿಮ್ಮ ಕಾದಂಬರಿಗಳು ಕೂಡ ಹಾಗೇ ಇರುತ್ತವೆ, ಅಲ್ಲವೇ? ಓದುಗರು ನಿರೀಕ್ಷಿಸುವ ಅಂತ್ಯವನ್ನು ಕೊಡುವುದಿಲ್ಲ. ಇದರ ಹಿಂದೆ ಕಾಫ್ಕ ಪ್ರಭಾವವಿದೆಯೇ?**

ಅದೊಂದೆ ಅಲ್ಲ. ರೇಮಂಡ್ ಚಾಂಡ್ಲರ್‌ನ ಕೃತಿಗಳೂ ಹಾಗೇ ಇರುತ್ತವೆ. ಅವನ 'The Big Sleep' ಕಾದಂಬರಿ ಕುರಿತು ಒಂದು ಇಂಟರೆಸ್ಟಿಂಗ್ ಪ್ರಸಂಗವಿದೆ. ಆ ಕಾದಂಬರಿಯನ್ನು ಹೊವರ್ಡ್ ಹಾಕ್ಸ್ (ಚಲನಚಿತ್ರ ನಿರ್ದೇಶಕ) ಸಿನಿಮಾ ಮಾಡಿದ. ಆ ಕಾದಂಬರಿಯಲ್ಲಿ ಕೊಲೆಗಾರ ಯಾರು ಅಂತ ಹೊವರ್ಡ್‌ಗೆ ಅರ್ಥವಾಗಲಿಲ್ಲ. ಅವನು ಚಾಂಡ್ಲರ್‌ಗೆ ಫೋನ್ ಮಾಡಿ ಕೇಳಿದ. ಅದಕ್ಕೆ ಚಾಂಡ್ಲರ್ 'ಯಾರು ಮಾಡಿದ್ದರೆ ನನಗೇನು? ಬಿಡು' ಅಂದ. ಇದೇ ಕೊನೆ ಅಂದುಕೊಳ್ಳುವುದು ಅರ್ಥಹೀನ. 'The Brothers Karamazov' ಕಾದಂಬರಿಯಲ್ಲಿ ಕೊಲೆಗಾರ ಯಾರು ಅನ್ನುವುದರ ಬಗ್ಗೆ ನನಗೆ ಆಸಕ್ತಿಯಿಲ್ಲ.